


ಮಾಡುವುದು, ಅದನ್ನು ಆಧರಿಸಿ ನೀವೇ ಸಿದ್ಧಪಡಿಸಿದ ಟಿಪ್ಪಣಿ ನೋಟ್ಸ್‌ಗೆ ಆದ್ಯತೆ ನೀಡುವುದು ಮುಖ್ಯ. ಸಿದ್ಧಪಡಿಸಿಕೊಳ್ಳುವ ಟಿಪ್ಪಣಿಗಳಲ್ಲಿ ಮರೆಯುವ ಹಾಗೂ ಗೊಂದಲವುಂಟು ಮಾಡುವ ಕ್ಲಿಷ್ಟಕರ ಅಂಶಗಳಿಗೆ ಆದ್ಯತೆಯಿರಲಿ.

- ಕಂಠಪಾಠ ಅಥವಾ ಉರು ಹೊಡೆಯುವ ವಿಧಾನ ಅಷ್ಟು ಸಮಂಜಸವಲ್ಲ. ಭಾಷಾ ವಿಷಯಗಳಲ್ಲಿ ಕೆಲವು ಪದ್ಯಗಳನ್ನು ಸುಲಭವಾಗಿ ಬಾಯಿಪಾಠ ಮಾಡಬಹುದು. ಆದರೆ ಎಲ್ಲಾ ಸಂದರ್ಭದಲ್ಲೂ ಅದು ಉಪಯೋಗವಾಗುವುದಿಲ್ಲ. ವಿಜ್ಞಾನ ಹಾಗೂ ಸಮಾಜ, ಗಣಿತ ವಿಷಯಗಳಲ್ಲಿ ಅದಕ್ಕಿಂತ ಅರ್ಥೈಸಿಕೊಂಡು ಓದಬೇಕು. ಏಕೆಂದರೆ ಬಾಯಿಪಾಠದ ಕಲಿಕೆ ಬೇಗ ಮರೆತುಹೋಗುತ್ತದೆ. ನೇರ ಪ್ರಶ್ನೆಗೆ ಮಾತ್ರ ಉತ್ತರಿಸಬಹುದು. ಅರ್ಥಮಾಡಿಕೊಂಡು ಓದುವ ವಿಷಯಗಳು ದೀರ್ಘಕಾಲ ಉಳಿಯುತ್ತದೆ. ಪ್ರಶ್ನೆಯನ್ನು ಯಾವುದೇ ರೀತಿ ಕೇಳಿದರೂ ಸಮರ್ಥವಾಗಿ ಉತ್ತರಿಸಬಹುದು.
- ಅರ್ಥವೇ ಆಗದ ಕೆಲವು ಪರಿಕಲ್ಪನೆಗಳನ್ನು ಬರೆದು ಅಭ್ಯಾಸ ಮಾಡಬೇಕು. ಕ್ಲಿಷ್ಟಕರ ಹಾಗೂ ಮರೆತು ಹೋಗುವ ಅಂಶಗಳಿಗೆ ಪುನರಾವರ್ತಿತ ಅಧ್ಯಯನ ಬೇಕು. ನೋಟ್ಸ್‌ನಲ್ಲಿ ಮುಖ್ಯ ಸಂಗತಿಗಳನ್ನು ಎದ್ದು ಕಾಣುವಂತೆ ಮಾರ್ಕ್ ಮಾಡಿಕೊಳ್ಳಬೇಕು.
- ನೆನಪಿನಲ್ಲಿಟ್ಟುಕೊಳ್ಳುವ ಪ್ರಮುಖ ದಿನಾಂಕ, ಸೂತ್ರ, ರೇಖಾಚಿತ್ರಗಳು, ಸಮೀಕರಣಗಳು ಸೇರಿದಂತೆ ಕ್ಲಿಷ್ಟ ಅನ್ನಿಸುವ ಅಂಶಗಳ ಚಾರ್ಟ್ ತಯಾರಿಸಿ ಕಣ್ಣಿಗೆ ಕಾಣುವಂತೆ ನೇತುಹಾಕಿಕೊಳ್ಳಬೇಕು. ಪದೇ ಪದೇ ನೋಡುವುದು, ಪುನರ್ ಮನನ ಮಾಡುವುದರಿಂದ ದೀರ್ಘಕಾಲ ನೆನಪಿನಲ್ಲಿ ಉಳಿಯುತ್ತದೆ.
- ಕಲಿತ ವಿಷಯವನ್ನು ಇತರರ ಜೊತೆ ಹಂಚಿಕೊಳ್ಳುವುದರಿಂದ, ವಿಷಯಗಳನ್ನು ಮರೆಯದಂತೆ ಕಾಪಿಟ್ಟುಕೊಳ್ಳಬಹುದು. ಪ್ರತಿ ಅಧ್ಯಾಯದ ನಂತರ ಸ್ವಯಂಪರೀಕ್ಷೆ ಮಾಡಿಕೊಳ್ಳಬೇಕು.
- ಮಾದರಿ ಪ್ರಶ್ನೆಪತ್ರಿಕೆಗಳು, ಹಿಂದಿನ ವರ್ಷದ ಪಶ್ನೆಪತ್ರಿಕೆಗಳನ್ನು ಬಿಡಿಸಬೇಕು. ಇದರಿಂದ ಆತ್ಮವಿಶ್ವಾಸ ಹೆಚ್ಚಾಗುತ್ತದೆ.

ಯಾವ ವ್ಯಕ್ತಿಯೂ ಹುಟ್ಟಿನಿಂದಲೇ ಮೇಧಾವಿಯಾಗಿ ಅಥವಾ ದಡ್ಡನಾಗಿ ಹುಟ್ಟುವುದಿಲ್ಲ. ತಮ್ಮ ಪರಿಶ್ರಮದಿಂದ ಯಾರು ಬೇಕಾದರೂ ಮೇಧಾವಿಗಳಾಗಬಹುದು. ನಾನು ಹೆಚ್ಚು ಅಂಕಗಳಿಸಿ ಸಾಧನೆ ಮಾಡುತ್ತೇನೆ ಎಂದು ಇಂದೇ ದೃಢಸಂಕಲ್ಪ ಮಾಡಿ. ಛಲ, ಆಸಕ್ತಿ, ಆತ್ಮವಿಶ್ವಾಸದಿಂದ ನೀವು ಅಂದುಕೊಂಡಿದ್ದನ್ನು ಅಂದುಕೊಂಡಂತೆಯೇ ಸಾಧಿಸಿ ತೋರಿಸಬಹುದು.

ಶಾಲಾಕಾಲೇಜುಗಳು ಈಗಷ್ಟೇ ಆರಂಭವಾಗಿವೆ. ಪರೀಕ್ಷೆಗಿನ್ನೂ ಸಾಕಷ್ಟು ಸಮಯವಿದೆ ಎಂದು ಉದಾಸೀನ ಮಾಡುವಂತಿಲ್ಲ. ಈಗಿನಿಂದಲೇ ಸಿದ್ಧತೆ ಆರಂಭಿಸಿದರೆ, ಪರೀಕ್ಷೆ ಸುಲಭವಾಗುತ್ತದೆ ಹಾಗೂ ಉತ್ತಮ ಫಲಿತಾಂಶ ಲಭ್ಯವಾಗುತ್ತದೆ.

ನಮ್ಮ ಹಣೆಬರಹವನ್ನು ಬ್ರಹ್ಮ ಬರೆಯುತ್ತಾನೆ ಎನ್ನುವ ನಂಬಿಕೆಯಿದೆ. ಆದರೆ, ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ನಮ್ಮ ಹಣೆಬರಹವನ್ನು ನಾವೇ ಬರೆದುಕೊಳ್ಳುವ ಅವಕಾಶವನ್ನು ಶಿಕ್ಷಣ ಒದಗಿಸಿಕೊಟ್ಟಿದೆ. ಪರೀಕ್ಷೆ ಎನ್ನುವುದು ನಮ್ಮ ಹಣೆಬರಹವನ್ನು ನಾವು ಯಾವ ರೀತಿಯಲ್ಲಿ ಬರೆದುಕೊಳ್ಳುತ್ತೇವೆ ಎನ್ನುವ ನಿರ್ಣಾಯಕ ಸಂದರ್ಭವೂ ಹೌದು. ಹಾಗಾಗಿ, ಆ ಪರೀಕ್ಷೆಯನ್ನು ಎದುರಿಸಲು ಸಮರ್ಪಕ ಸಿದ್ಧತೆ ಅಗತ್ಯ.

ಎಲ್ಲ ವಿದ್ಯಾರ್ಥಿಗಳೂ ಒಂದು ಮಾತನ್ನು ನೆನಪಿನಲ್ಲಿಡುವುದು ಅಗತ್ಯ. ಏನೆಲ್ಲ ಸಿದ್ಧತೆ ಹಾಗೂ ಕಠಿಣ ಪರಿಶ್ರಮದ ನಂತರವೂ ಕೆಲವೊಮ್ಮೆ ಫಲಿತಾಂಶ ನಿರೀಕ್ಷಿಸಿದಷ್ಟು ಉತ್ತಮವಾಗಿರುವುದಿಲ್ಲ. ಅಂಥ ಸಂದರ್ಭದಲ್ಲಿ ಎದೆಗುಂದಬೇಕಿಲ್ಲ. 'ಮರಳಿ ಯತ್ನವ ಮಾಡು' ಎನ್ನುವುದು ವಿದ್ಯಾರ್ಥಿಗಳಿಗೆ ಹೊಂದುವ ಮಾತು. ವಿದ್ಯಾರ್ಥಿಗಳು ಮರೆಯಬಾರದ ಮತ್ತೊಂದು ಸಂಗತಿ: ಶಾಲಾಕಾಲೇಜುಗಳಲ್ಲಿನ ಕಲಿಕೆ ಪರೀಕ್ಷೆಗಳನ್ನು ಎದುರಿಸುವುದಕ್ಕೆ ಮಾತ್ರ ಸೀಮಿತವಲ್ಲ; ಜ್ಞಾನ ಸಂಪಾದನೆಗೂ ಅಗತ್ಯವಾದುದು. ಈ ಕಲಿಕೆ ಪರೀಕ್ಷೆಯ ನಂತರವೂ ಜೀವನದುದ್ದಕ್ಕೂ ನಮ್ಮ ಜೊತೆಗಿರುತ್ತದೆ.

ಪ್ರತಿಕ್ರಿಯಿಸಿ: feedback@sudha.co.in